# ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಕೆ. ಆರ್. ಪೇಟೆ.

| ಸಿಸಿ:ನಂಬರ್ 102/2015 | ಸಿಡಬ್ಲ್ಯೂ-1 | ಪಿ.ಡಬ್ಲ್ಯೂ-1 |
|---|---|---|

ಸಾಕ್ಷಿದಾರರ ಹೆಸರು : ಮನು ಎಸ್.ಜೆ
ತಂದೆಯ ಹೆಸರು : ಜವರನಾಯಕ
ವಯಸ್ಸು : 29 ವರ್ಷ
ಉದ್ಯೋಗ : ಚಾಲಕ
ವಾಸ ಸ್ಥಳ : ಸಾಕ್ಷಿಬೀಡು ಗ್ರಾಮ, ಕೆ.ಆರ್.ಪೇಟೆ ತಾಲ್ಲೂಕು.

ದಿನಾಂಕಃ 21.11.2022 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದೆ.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದ**

ನನಗೆ ಆರೋಪಿತರ ಪರಿಚಯವಿದೆ. ಅವರು ನನ್ನ ಸಂಬಂಧಿಕರು. ಚಾಸಾ 2 ಮಹದೇವ ನನ್ನ ಅಣ್ಣ. ಚಾಸಾ 3 ಮಹದೇವಮ್ಮ @ ಲಕ್ಷ್ಮಮ್ಮ ನನ್ನ ತಾಯಿ. ದಿನಾಂಕ 23-11-2014 ಬೆಳಗ್ಗೆ 9 ಗಂಟೆಗೆ ಸಾಕ್ಷಿಬೀಡು ಗ್ರಾಮದಲ್ಲಿ ನಾನು, ನನ್ನ ಅಣ್ಣ ಮತ್ತು ತಾಯಿ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದೆವು. ನಮಗೆ ಸೇರಿದ ಪೈಪುಗಳಿಗೆ ಆರೋಪಿತರು ಬೆಂಕಿ ಹಾಕುತ್ತಿದ್ದರು. ನಾನು ಪ್ರಶ್ನಿಸಿದ್ದಕ್ಕೆ ಆರೋಪಿತರಾದ ವಿನಾಯಕ, ನಾಗರಾಜು ಮತ್ತು ಶಿವರಾಮನಾಯಕರವರು ಗುದ್ದಲಿ ಕಾವಲಿನಿಂದ ನನ್ನ ತಲೆಯ ಬಲಭಾಗಕ್ಕೆ ಹಲ್ಲೆ ಮಾಡಿದರು. ಆರೋಪಿತರು ನಮ್ಮನ್ನು ಉದ್ದೇಶಿಸಿ ಅವಾಚ್ಯವಾಗಿ ಸೂಳೆಮಕ್ಕಳ ಬೋಳಿಮಕ್ಕಳ ಹೊಲಕ್ಕೆ ಕೇಸು ಹಾಕುತ್ತೀರ ಎಂದು ಅವಾಚ್ಯವಾಗಿ ಬೈದರು. ಬಿಡಿಸಲು ಬಂದಾಗ ಗೊದಮೊಟ್ಟೆಯಿಂದ ಮತ್ತು ಗುದ್ದಲಿ ಕಾವಿನಿಂದ ಆರೋಪೇಪಿತರಾದ ವಿನಾಯಕ ನಾಗರಾಜು ಮತ್ತು ಶಿವರಾಮನಾಯಕರವರು ನನ್ನ ಅಣ್ಣನಿಗೆ ಹಲ್ಲೆ ಮಾಡಿದರು. ಗುದ್ದಲಿ ಕಾವಿನಿಂದ ನಾಗರಾಜು ಮತ್ತು ಗೊದಮೊಟ್ಟೆಯಿಂದ ಶಿವರಾಮನಾಯಕರವರು ನನ್ನ ಅಣ್ಣನಿಗೆ ಹಲ್ಲೆ ಮಾಡಿದರು. ನನ್ನ ತಾಯಿಗೆ ಆರೋಪಿತರಾದ ಪದ್ಮಮ್ಮ ಮತ್ತು ಶ್ವೇತಾ ಕೈಯಿಂದ ನನ್ನ ತಾಯಿಯ ತಲೆ ಕೂದಲನ್ನು ಹಿಡಿದು ಎಳೆದಾಡಿದರು. ಆರೋಪಿತರು ನನ್ನಮತ್ತು ನನ್ನ ಅಣ್ಣನ ಬಟ್ಟೆಗಳನ್ನು ಹಿಡಿದು ಎಳೆದಾಡಿ ಹರಿದುಹಾಕಿದರು. ಜಗಳವನ್ನು ಶಿವೇಗೌಡ ಮತ್ತು ಪ್ರಕಾಶರವರು ಬಿಡಿಸಿರುತ್ತಾರೆ. ಆರೋಪಿತರು ಇವತ್ತು ಬದುಕಿದ್ದೀರಿ ನಿಮಗೆ ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿದರು. ನಂತರ ನಾವು ಕೆ.ಆರ್.ಪೇಟೆ ಸರ್ಕಾರಿ ಆಸ್ಪತ್ರೆಗೆ ಬಂದು ಚಿಕಿತ್ಸೆಯನ್ನು ಪಡೆದುಕೊಂಡೆವು. ನಾನು ಪೊಲೀಸರಿಗೆ ದೂರನ್ನು ನೀಡಿದೆನು. ದೂರನ್ನು ನಿಪಿ1 ಎಂದು ಸಾಕ್ಷಿಯ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು.

ನಾನು ದೂರು ನೀಡಿದ ದಿವಸವೇ ಪೊಲೀಸರು ಸ್ಥಳಕ್ಕೆ ಬಂದು ನಾನು ಸ್ಥಳವನ್ನು ತೋರಿಸಿದ ಮೇರೆಗೆ ಸ್ಥಳ ಪಂಚನಾಮೆಯನ್ನು ಜರುಗಿಸಿದರು. ಆ ಸಮಯದಲ್ಲಿ ರಾಮಸ್ವಾಮಿ ಮತ್ತು ರಮೇಶರವರು ಹಾಜರಿದ್ದರು. ಪಂಚನಾಮೆ ಕಾಲಕ್ಕೆ ಪೊಲೀಸರು 2 ಗುದ್ದಲಿ ಕಾವಲು, ಒಂದು ತೆಂಗಿನ ಗೊದಮೊಟ್ಟೆ ಮತ್ತು 2 ಬನಿಯನ್ ಗಳನ್ನು ವಶಪಡಿಸಿಕೊಂಡರು. ಪಂಚನಾಮೆಯನ್ನು ನಿಪಿ2 ಎಂದು ಸಾಕ್ಷಿಯ ಸಹಿಯನ್ನು ನಿಪಿ2 ಎ ಎಂದು ಗುರುತಿಸಲಾಯಿತು.

ಮುದ್ದೆಮಾಲುಗಳನ್ನು ಗುರುತಿಸುವಿಕೆಯ ಬಗ್ಗೆ ಮಾನ್ಯ ಸಸಅ ರವರು ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

(ಶಮೀರ್.ಪಿ.ನಂದ್ಯಾಲ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.